OS No. 92/2017 PW-2

<u>ದಿನಾಂಕ **11.04.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ **1** ರಿಂದ **5** ನೇ ಪ್ರತಿವಾದಿಯವರ ಪರ ಶ್ರೀ ಡಿ ಜಿ ವಕೀಲರಿಂದಃ</u>

ದಿಃ18.05.2016 ರಂದು ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ಒಟ್ಟು 8 ಜನರು ಇದ್ದೆವು. ನಿಪಿ-1 ರ ಕರಾರು ಪತ್ರವನ್ನು ನಾನು ಬರೆಸಿಲ್ಲ ದಿನೇಶ್ ರವರು ಬರೆಸಿರುತ್ತಾರೆ. ಕರಾರು ಪತ್ರದಲ್ಲಿರುವ ವಿಷಯ ಗೊತ್ತಿದೆ . ದಾವಾ ಆಸ್ತಿಗೆ ಸಂಬಂದಪಟ್ಟಂತೆ ವಾದಿಗೆ ಏನಾದರು ಮಾಹಿತಿ ನೀಡಿದ್ದೀರಾ ಎಂದು ಕೇಳಿದ್ದಕ್ಕೆ ಸಾಕ್ಷಿಯು ಖರೀದಿ ಬಗ್ಗೆ ತಿಳಿಸಿರುತ್ತಾರೆಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಸುಮಾರು ವರ್ಷಗಳಿಂದ ಪರಿಚಯ. 1 ನೇ ಪ್ರತಿವಾದಿರವರು ನನಗೆ ಕಷ್ಟದ ಬಗ್ಗೆ ತಿಳಿಸಿಲ್ಲ. ಕರಾರು ಆದಾಗ ನಾನು ಹೋಗಿರುತ್ತೇನೆ. ಕ್ರಯದ ವ್ಯವಹಾರ ನನಗೆ ಗೊತ್ತಿಲ್ಲ ಎಂದರೆ ಸುಳ್ಳು. ಸಹಿ ಬಿಟ್ಟು ನನಗೆ ಬೇರೆ ಏನೂ ಗೊತ್ತಿಲ್ಲ ಎಂದರೆ ಸುಳ್ಳು. ಕರಾರು ಆಗುವ ಸಮಯದಲ್ಲಿ 1 ರಿಂದ 5 ನೇ ಪ್ರತಿವಾದಿಯವರು ಇರಲಿಲ್ಲ ಎಂದರೆ ಸುಳ್ಳು. 1 ನೇ ಪ್ರತಿವಾದಿಯು 5 ಲಕ್ಷ ಸಾಲ ಕೊಡಿಸಲು ನನಗೆ ತಿಳಿಸಿದ್ದರು ಎಂದರೆ ಸುಳ್ಳು. ಈ ಸಂಬಂದ 1 ನೇ ಪ್ರತಿವಾದಿಯು ನನಗೆ ದಾವಾ ಆಸ್ತಿಯ ದಾಖಲೆಯನ್ನು ಕೊಟ್ಟಿದ್ದರು ಎಂದರೆ ಸುಳ್ಳು. 10 ಲಕ್ಷದ ಭದ್ರತೆಗಾಗಿ ನಿಪಿ-1 ಕರಾರು ಪತ್ರವನ್ನು ಬರೆಸಿಕೊಂಡಿದ್ದರು ಎಂದರೆ ಸುಳ್ಳು. ಕರಾರಿನ ಲಾಭ ಪಡೆಯಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ಕರಾರು ರದ್ದತಿ ಮಾಡಲು 1 ನೇ ಪ್ರತಿವಾದಿಯು ನನ್ನ ಬಳಿ ಕೇಳಿದರು ಎಂದರೆ ಸುಳ್ಳು. ವಾದಿ 10 ಲಕ್ಷ ಪಡೆದು ಕರಾರನ್ನು ರದ್ದು ಮಾಡಿಲ್ಲ ಎಂದರೆ ಸುಳ್ಳು. ವಾದಿ ಕರಾರು ರದ್ದು ಮಾಡದೇ ಇದ್ದುದ್ದರಿಂದ ಉಪನೊಂದಣಾಧಿಕಾರಿಯವರ ಕಛೇರಿಯಿಂದ ಬಂದು ಬಿಟ್ಟಿದ್ದಾರೆಂದರೆ ಸುಳ್ಳು. ನಾನು ವಾಸ್ತವಾಂಶಗಳನ್ನು ಮರೆ ಮಾಚುತ್ತಿದ್ದೇನೆಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.